KAHV510009542024

<u>2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು.</u>

<u>ಉಪಸ್ಥಿತಿಃ</u>- ಶ್ರೀ. ಮಂಜುನಾಥ ಎಂ.ಎಸ್, ಬಿಎ., ಎಲ್.ಎಲ್.ಬಿ
2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ, ನ್ಯಾಯಾಲಯ, ರಾಣೇಬೆನ್ನೂರು.

ತೀರ್ಪಿನ ದಿನಾಂಕ **1** ನೇ ಆಗಷ್ಟ, **2026**

<u>ಸಿ ಸಿ ನಂಬರಃ **213 / 2024**</u>

<u>ಪಿರ್ಯಾದಿದಾರರು</u> **:** ರಾಣೇಬೆನ್ನೂರು ನಗರ ಪೋಲಿಸ್ ಠಾಣೆ,
ರಾಣೇಬೆನ್ನೂರು.
(ಸಹಾಯಕ ಸರ್ಕಾರಿ ಅಭಿಯೋಜಕರು).

- ವಿರುದ್ಧ -

<u>ಆರೋಪಿತರು</u> **:** ಅ. ಪ್ರಭಾವತಿ ಕೋಂ ಜಯ್ಯಪ್ಪ ನೆಗಳೂರು,
ವಯಸ್ಸುಃ ೫೫ ವರ್ಷ, ಉಃ ಮನೆಗೆಲಸ, ವಾಸಃ
ಮಾರುತಿ ನಗರ, ಬೆಟಗೇರಿ, ಗದಗ.

೯. ಜಯ್ಯಪ್ಪ ತಂದೆ ಈಶಪ್ಪ ನೆಗಳೂರು,
ವಯಸ್ಸುಃ ೫೫ ವರ್ಷ, ಉಃ ಕೂಲಿ ಕೆಲಸ,
ವಾಸಃ ಮಾರುತಿ ನಗರ, ಬೆಟಗೇರಿ, ಗದಗ.

೧೦. ಸುಶೀಲವ್ವ @ ಕುಸಲವ್ವ ಕೋಂ
ನಾರಾಯಣಪ್ಪ ಹುಬ್ಬಳ್ಳಿ ವಯಸ್ಸುಃ ೬೦
ವರ್ಷ, ಉಃ ಮನೆಗೆಲಸ, ವಾಸಃ ಚನ್ನಪೇಟೆ,
ಹುಬ್ಬಳ್ಳಿ ಜಿಃ ದಾರವಾಢ.

೧೧. ಪುಷ್ಪವ್ವ ಕೋ ಹೂವಪ್ಪ ಬಣ್ಣದ,
ವಯಸ್ಸುಃ ೫ಅ ವರ್ಷ, ಉಃ ಮನೆಗೆಲಸ, ವಾಸಃ
ಚನ್ನಪೇಟೆ, ಹುಬ್ಬಳ್ಳಿ ಜಿಃ ದಾರವಾಢ.
(ಮರಣಹೊಂದಿರುತ್ತಾರೆ)

(ಆರೋಪಿ ಅ & ೯ ರ ಪರ ಶ್ರೀ ಎನ್.ಜಿ.ಹೆಚ್, ವಕೀಲರು.

ಆರೋಪಿ ೧೦ ರ ಪರ ಶ್ರೀ ಎಸ್.ಡಿ.ಡಿ, ವಕೀಲರು).

| | | |
|---|---|---|
| ಪಿರ್ಯಾದುದಾರರ ಹೆಸರು | **:** | ಕೊಟ್ರೇಶಪ್ಪ ಬೊಸಪ್ಪನವರ. |
| ಆರೋಪಿಸಲ್ಪಟ್ಟ ಅಪಾದನೆ | **:** | ಭಾರತೀಯ ದಂಡ ಸಂಹಿತೆ ಕಲಂ 120 ಬಿ ಮತ್ತು 420 ಸಹ ಕಲಂ 149. |
| ಅಪರಾಧ ದಿನಾಂಕ | : | ದಿಃ 19-11-2009. |
| ಅಪರಾಧ ದಾಖಲಾದ ದಿನಾಂಕ | : | ದಿಃ 22-03-2015 |
| ಆರೋಪಿಯನ್ನು ದಸ್ತಗಿರಿ ಮಾಡಿದ ದಿನಾಂಕ | : | ಇಲ್ಲಾ |
| ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ ದಿನಾಂಕ | : | 02-08-2022 ಹಾಗೂ 07-08-2022 |
| ಸಾಕ್ಷ್ಯ ಪ್ರಾರಂಭವಾದ ದಿನಾಂಕ | : | 06-09-2018 |
| ಸಾಕ್ಷ್ಯ ಮುಕ್ತಾಯಗೊಂಡ ದಿನಾಂಕ | : | 02-03-2021 |
| ತೀರ್ಪು ಘೋಷಿಸಿದ ದಿನಾಂಕ | : | **01-08-2026** |
| ನ್ಯಾಯಾಧೀಶರ ನಿರ್ಣಯ | : | ಭಾರತೀಯ ದಂಡ ಸಂಹಿತೆ ಕಲಂ 120 ಬಿ ಮತ್ತು 420 ಸಹ ಕಲಂ 149 ರ ಅಡಿಯಲ್ಲಿನ ಆರೋಪ ಸಾಭೀತಾಗಿಲ್ಲ. |

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ನ್ಯಾಯಾಲಯ, ರಾಣೇಬೆನ್ನೂರು.

ತೀರ್ಪು

ಪಿ.ಎಸ್.ಐ, ರಾಣೇಬೆನ್ನೂರು ಶಹರ ಪೋಲೀಸ್ ಠಾಣೆ ಇವರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 120 ಬಿ ಹಾಗೂ 420 ಸಹ ಕಲಂ 149 ರ ಅಡಿಯಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕಾರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ

ಆರೋಪಿತರೆಲ್ಲರೂ ಒಳ ಸಂಚು ರೂಪಿಸಿ, ರಾಣೇಬೆನ್ನೂರು ಶಹರ ಪೊಲೀಸ್ ಠಾಣೆಯ ವ್ಯಾಪ್ತಿ ರಾಣೆಬೆನ್ನೂರು ಶಹರದ ದೊಡ್ಡಪೇಟೆ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ದಿನಾಂಕಃ 19-11-2009 ರಂದು ಮದ್ಯಾಹ್ನ 12-04 ರ ಸಮಯದಲ್ಲಿ 1 ನೇ ಆರೋಪಿತಳ ಮೂಲ ಜಾತಿಯು ಆಧಿ ಕರ್ನಾಟಕ ಅಂತಾ ಇದ್ದಾಗ್ಯೂ ಸಹ 1 ನೇ ಆರೋಪಿತಳ ನಿಜವಾದ ಜಾತಿಯನ್ನು ಪಿರ್ಯಾದಿಗೆ ಹೇಳದೇ ಮೋಸ ಮಾಡಿ 1 ನೇ ಆರೋಪಿತಳನ್ನು ಪಿರ್ಯಾದಿಯೊಂದಿಗೆ ಸುಳ್ಳು ಜಾತಿ ಹೇಳಿ ಮದುವೆ ಮಾಡಿ ಭಾರತೀಯ ದಂಡ ಸಂಹಿತೆ ಕಲಂ.120 ಬಿ ಹಾಗೂ 420 ಸಹಕಲಂ 149 ರಡಿಯಲ್ಲಿ ಅಪರಾಧ ವೆಸಗಿರುತ್ತಾರೆ ಎನ್ನುವುದಾಗಿದೆ.

3. ತನಿಖೆಯನ್ನು ಪೂರ್ಣಗೊಳಿಸಿ ತನಿಖಾಧಿಕಾರಿಯವರು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಸದರಿ ದೋಷಾರೋಪಣ ಪಟ್ಟಿಯನ್ನು ಮತ್ತು ಅದರ ಜೊತೆಗೆ ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ಅಪರಾಧ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರಿಗೆ ಸಮನ್ಸನ್ನು ಹೊರಡಿಸಿರುತ್ತದೆ. ಮೂಲ ಪ್ರಕರಣ ಸಿಸಿ ನಂ.978/2015 ರಲ್ಲಿ, ಈ ಪ್ರಕರಣದಲ್ಲಿ ಆರೋಪಿತರಾದ 8 ರಿಂದ 11 ನೇದ್ದವರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ, ದಿನಾಂಕಃ 08-05-2018 ರಂದು ಸದರಿ ಆರೋಪಿತರ ವಿರುದ್ದ ಪ್ರಕರಣ ಪ್ರತ್ಯೇಕಗೊಂಡು, ಸಿಸಿ ನಂ.15/2022 ದಾಖಲಾಗಿದ್ದು ಇರುತ್ತದೆ. ದಿಃ 28-07-2022 ರಂದು ಆರೋಪಿ ನಂ.8 ಮತ್ತು 9 ನೇ ದವರನ್ನು ದಸ್ತಗಿರಿ ಮಾಡಿ ಸದರಿ ಪ್ರಕರಣದಲ್ಲಿ ಹಾಜರುಪಡಿಸಿದ್ದು ಇರುತ್ತದೆ. ಸದರಿಯವರನ್ನು ದಿಃ 02-08-2022 ರಂದು ಜಾಮೀನಿನ ಮೇಲೆ

ಬಿಡುಗಡೆಗೊಳಿಸಲಾಗಿರುತ್ತದೆ. ದಿ:07-08-2022 ರಂದು ಆರೋಪಿ ನಂ.10 ರವರನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು ಸದರಿ ಆರೋಪಿಯನ್ನು ದಿ: 08-08-2022 ರಂದು ಬಿಡುಗಡೆಗೊಳಿಸಲಾಗಿರುತ್ತದೆ. ದಿ: 21-02-2024 ರಂದು ಸದರಿ ಪ್ರಕರಣ ಈ ನ್ಯಾಯಾಲಯಕ್ಕೆ ವರ್ಗಾವಣೆಗೊಂಡು ಪ್ರಸ್ತುತ ಸಿಸಿ ನಂ.213/2024 ರಂತೆ ಪ್ರಕರಣ ದಾಖಲಾಗಿದ್ದು ಇರುತ್ತದೆ. ಈ ನ್ಯಾಯಾಲಯ ನೀಡಿದ ಸಮನ್ಸ್‌ಗೆ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಾಗಿರುತ್ತಾರೆ. ಅವರಿಗೆ ಅಂತಿಮ ವರದಿಯ ಪ್ರತಿಗಳನ್ನು ಉಚಿತವಾಗಿ ನೀಡಲಾಗಿದೆ. ಉಭಯ ಪಕ್ಷಗಾರರ ವಾದ ಆಲಿಸಿದ ನಂತರ, ಈ ನ್ಯಾಯಾಲಯವು ಆರೋಪಿತರ ವಿರುದ್ಧ ಮೇಲೆ ಹೇಳಿದ ಅಪರಾಧಗಳಿಗೆ ಭಾರತೀಯ ದಂಡ ಸಂಹಿತೆ ಕಲಂ 120 ಬಿ ಹಾಗೂ 420 ಸಹಕಲಂ 149 ರ ಅಡಿಯಲ್ಲಿ ದೋಷಾರೋಪಣೆ ಮಾಡಿರುತ್ತದೆ. ಪ್ರತಿಯಾಗಿ ಆರೋಪಿತರು ತಾವು ತಪ್ಪು ಮಾಡಿಲ್ಲವೆಂದು, ವಿಚಾರಣೆ ಮಾಡಬೇಕೆಂದು ಬಯಸಿರುತ್ತಾರೆ. ಪರಿಣಾಮವಾಗಿ ಪ್ರಕರಣವನ್ನು ಅಭಿಯೋಜನೆ ಪರ ಸಾಕ್ಷಿಗಳ ವಿಚಾರಣೆಗೆ ಮುಂದೂಡಲಾಗಿರುತ್ತದೆ.

4. ದಿ: 29-04-2026 ರಂದು ಆದ ಆದೇಶದ ಪ್ರಕಾರ ಮೂಲ ಪ್ರಕರಣದಲ್ಲಿ ದಾಖಲಾಗಿದ್ದ ಸಾಕ್ಷಿದಾರರ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಈ ಪ್ರಕರಣಕ್ಕೆ ಅಳವಡಿಸಿಕೊಳ್ಳಲಾಗಿರುತ್ತದೆ. ಆರೋಪಿತರ ವಿರುದ್ದ ಆರೋಪವನ್ನು ರುಜುವಾತು ಪಡಿಸುವುದಕ್ಕಾಗಿ ಅಭಿಯೋಜನೆಯವರು ತಮ್ಮ ಪರವಾಗಿ ಮೂಲ ಪ್ರಕರಣದಲ್ಲಿ ಒಟ್ಟು ಹತ್ತು ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿ, 17 ದಾಖಲಾತಿಗಳನ್ನು ನಿಪಿ-1 ರಿಂದಾ ನಿಪಿ-17 ಅಂತಾ ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯವರ ಪರ ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ನಂತರ, ಆರೋಪಿತರ ಹೇಳಿಕೆಯನ್ನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ದಾಖಲು ಮಾಡಿಕೊಳ್ಳಲಾಗಿದ್ದು ಆರೋಪಿತರು ತಮ್ಮ ಹೇಳಿಕೆಯಲ್ಲಿ ಅಭಿಯೋಜನೆಯ ಪರ ಸಾಕ್ಷಿದಾರರ

ಹೇಳಿಕೆಯನ್ನು ಸಂಪೂರ್ಣವಾಗಿ ನಿರಾಕರಣೆ ಮಾಡಿರುತ್ತಾರೆ. ಆರೋಪಿತರು ತಮ್ಮ ಪರ ಯಾವುದೇ ಸಾಕ್ಷಿದಾರರನ್ನು ವಿಚಾರಿಸಿಕೊಂಡಿಲ್ಲ.

5. ಎರಡೂ ಕಡೆಯ ವಾದವನ್ನು ಆಲಿಸಲಾಗಿದೆ ಮತ್ತು ಕಡತವನ್ನು ಪರಿಶೀಲಿಸಲಾಗಿದೆ.

6. ಅಭಿಯೋಜನಾ ದಾಖಲೆಗಳನ್ನು, ಮೌಖಿಕ ಸಾಕ್ಷಿಗಳ ಸಾಕ್ಷ್ಯವನ್ನು ಹಾಗೂ ಎರಡೂ ಪಕ್ಷಗಾರರ ವಾದಗಳನ್ನು ಆಲಿಸಿದ ನಂತರ, ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆಃ

<u>ಅಂಶಗಳು</u>

1. ದಿನಾಂಕಃ 19.11.2009 ರಂದು 12.04 ಗಂಟೆಗೆ ರಾಣೆಬೆನ್ನೂರು ಶಹರ ಪೊಲೀಸ್ ಠಾಣಾ ವ್ಯಾಪ್ತಿಯ ರಾಣೆಬೆನ್ನೂರು ಶಹರದ ದೊಡ್ಡಪೇಟೆ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ಗುಂಪು ಕಟ್ಟಿಕೊಂಡು ಒಳಸಂಚು ರೂಪಿಸಿ, 1 ನೇ ಆರೋಪಿತಳ ಮೂಲ ಜಾತಿಯು ಆಧಿ ಕರ್ನಾಟಕ ಅಂತಾ ಇದ್ದಾಗ್ಯೂ ಸಹ 1 ನೇ ಆರೋಪಿತಳ ನಿಜವಾದ ಜಾತಿಯನ್ನು ಪಿರ್ಯಾದಿಗೆ ಹೇಳದೇ ದೇವಾಂಗ ಜಾತಿಯವರು ಎಂದು ಸುಳ್ಳು ಜಾತಿ ಹೇಳಿ ಮೋಸ ಮಾಡಿ, ಆಕೆಯನ್ನು ಫಿರ್ಯಾದಿಯೊಂದಿಗೆ ಮದುವೆ ಮಾಡಿದ ಅಪರಾಧಕ್ಕಾಗಿ ಭಾ.ದಂ.ಸಂ.ಕಲಂ.120 ಬಿ ಹಾಗೂ 420 ಸಹಕಲಂ 149 ರ ಅಡಿಯಲ್ಲಿ ದಂಡನಾರ್ಹ ಅಪರಾಧವೆಸಗಿದ್ದಾನೆಂದು ಅಭಿಯೋಜನೆಯು ಯುಕ್ತ ಸಂಶಯಾತೀತವಾಗಿ ಸಾಬೀತು ಪಡಿಸಿದೆಯೇ ?

2. ಯಾವ ಆದೇಶ **?**

7. ಈ ಮೇಲಿನ ಗಮನೀಯ ಅಂಶಗಳಿಗೆ ನ್ಯಾಯಾಲಯದ ಉತ್ತರ ಇಂತಿದೆ.

ಅಂಶ-**1** **:** ನಕಾರಾತ್ಮಕವಾಗಿದೆ

ಅಂಶ-**2** **:** ಅಂತಿಮ ಆದೇಶದಂತೆಃ

<u>ಕಾರಣಗಳು</u>

8. <u>ಅಂಶ ನಂ.**1**</u>**:** ಅಭಿಯೋಜನೆಯ ಪ್ರಮುಖ ಆರೋಪವೇನೆಂದರೆ, ಆರೋಪಿತರೆಲ್ಲರೂ ಒಳ ಸಂಚು ರೂಪಿಸಿ, ರಾಣೇಬೆನ್ನೂರು ಶಹರ

ಪೊಲೀಸ್ ಠಾಣೆಯ ವ್ಯಾಪ್ತಿ ರಾಣೆಬೆನ್ನೂರು ಶಹರದ ದೊಡ್ಡಪೇಟೆ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಅಂಬಾಭವಾನಿ ದೇವಸ್ಥಾನದಲ್ಲಿ ದಿನಾಂಕಃ 19-11-2009 ರಂದು ಮದ್ಯಾಹ್ನ 12-04 ರ ಸಮಯದಲ್ಲಿ 1 ನೇ ಆರೋಪಿತಳ ಮೂಲ ಜಾತಿಯು ಆಧಿ ಕರ್ನಾಟಕ ಅಂತಾ ಇದ್ದಾಗ್ಯೂ ಸಹ 1 ನೇ ಆರೋಪಿತಳ ನಿಜವಾದ ಜಾತಿಯನ್ನು ಪಿರ್ಯಾದಿಗೆ ಹೇಳದೇ ದೇವಾಂಗ ಜಾತಿ ಎಂದು ಸುಳ್ಳು ಜಾತಿ ಹೇಳಿ ಮೋಸ ಮಾಡಿ, ಆಕೆಯನ್ನು ಪಿರ್ಯಾದಿಯೊಂದಿಗೆ ಮದುವೆ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 120 ಬಿ ಹಾಗೂ 420 ಸಹ ಕಲಂ 149 ರ ಅಡಿಯಲ್ಲಿ ದಂಡನಾರ್ಹ ಅಪರಾಧವೆಸಗಿದ್ದಾರೆಂಬುದಾಗಿರುತ್ತದೆ. ಸದರಿ ಆರೋಪವನ್ನು ರುಜುವಾತು ಪಡಿಸಲು ಅಭಿಯೋಜನೆಯವರು ಹತ್ತು ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿ 17 ದಾಖಲೆಗಳನ್ನು ನಿಶಾನೆಯಾಗಿ ಗುರುತಿಸಿರುತ್ತಾರೆ.

9. ಚಾಸಾ-1/ಪ್ರಾಸಾ-3 ರವರು ಈ ಪ್ರಕರಣದಲ್ಲಿ ದೂರುದಾರರಾಗಿದ್ದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 19-11-2009 ರಂದು ತಾನು ರಾಣೇಬೆನ್ನೂರು ನಗರದ ದೊಡ್ಡಪೇಟೆಯಲ್ಲಿರುವ ಅಂಬಾಭವಾನಿ ದೇವಸ್ಥಾನದಲ್ಲಿ ಹಿಂದೂ ದೇವಾಂಗ ಜಾತಿ ಪದ್ಧತಿಯಂತೆ ಗುರು ಹಿರಿಯರ ಸಮಕ್ಷಮ 1 ನೇ ಆರೋಪಿಯನ್ನು ವಿವಾಹವಾಗಿರುವುದಾಗಿ ತಿಳಿಸಿರುತ್ತಾರೆ ಹಾಗೂ ಈ ಪ್ರಕರಣದ 15 ನೇ ಆರೋಪಿಯು ಹೆಣ್ಣು ತೋರಿಸುವ ಏಜೆಂಟರಾಗಿ ಕೆಲಸ ಮಾಡಿಕೊಂಡಿದ್ದು, ಸದರಿಯವರು ಮೋಸದಿಂದ ತನಗೆ ಅನ್ಯ ಜಾತಿಗೆ ಸೇರಿದ ಹೆಣ್ಣನ್ನು ಅಂದರೆ, ಆದಿ ಕರ್ನಾಟಕ ಮಾದರ ಎಸ್‌ಸಿ ಜಾತಿಗೆ ಸೇರಿದ 1 ನೇ ಆರೋಪಿಯನ್ನು ಮೋಸದಿಂದ ತೋರಿಸಿ ವಿವಾಹ ಮಾಡಿಸಿರುತ್ತಾರೆ. ಆರೋಪಿ 2 ರಿಂದ 14 ರವರು ಇದಕ್ಕೆ ಸಹಕರಿಸಿರುತ್ತಾರೆ. ಇದರಿಂದ ಸಮಾಜದಲ್ಲಿ ತನಗೆ ಸಾಮಾಜಿಕ ಕಿರುಕುಳ ಉಂಟಾಗಿರುತ್ತದೆ. ತಾನು 1 ನೇ ಆರೋಪಿಯ ವಿರುದ್ಧ ಈಗಾಗಲೇ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ ವಿಚ್ಛೇಧನ ಪಡೆದಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧವಾಗಿ 1 ನೇ ಆರೋಪಿ ಮತ್ತು ಆಕೆಯ ಮನೆಯವರು

ಹೆಣ್ಣನ್ನು ತೋರಿಸುವುದಾಗಿ ಹೇಳಿ ಮೋಸದಿಂದ ಮದುವೆ ಮಾಡಿರುತ್ತಾರೆ. ಆದುದರಿಂದ 1 ರಿಂದ 15 ನೇ ಆರೋಪಿತರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ನಿಪಿ-4 ರಂತೆ ದೂರನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಮದುವೆ ಕಾಲಕ್ಕೆ ತೆಗೆದ ಭಾವಚಿತ್ರಗಳನ್ನು, ಆಮಂತ್ರಣ ಪತ್ರಿಕೆಯನ್ನು, 1 ನೇ ಆರೋಪಿಯ ವರ್ಗಾವಣೆ ಪತ್ರವನ್ನು ಹಾಗೂ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯದಲ್ಲಿ ನಿಪಿ-5 ರಿಂದ 10 ಎಂಬುದಾಗಿ ಗುರುತಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡುವ ಕಾಲಕ್ಕೆ ಪ್ರಾಸಾ-3 ರವರು ತಮ್ಮ ಸಾಕ್ಷ್ಯದಲ್ಲಿ ಮದುವೆ ಮಾಡಿದ ಎರಡು-ಮೂರು ತಿಂಗಳುಗಳಲ್ಲಿ 1 ನೇ ಆರೋಪಿಯ ದಾಖಲೆಗಳನ್ನು ಪರಿಶೀಲಿಸಿ 1 ನೇ ಆರೋಪಿಯ ಬಗ್ಗೆ ತಿಳಿದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರಿ 1 ನೇ ಆರೋಪಿಯ ದಾಖಲೆಗಳನ್ನು ಪರಿಶೀಲಿಸಿದ ನಂತರ ಆವಾಗಲೇ ಅವರ ವಿರುದ್ಧ ಯಾವುದೇ ಕ್ರಮ ಜರುಗಿಸಿರುವುದಿಲ್ಲ ಎಂಬುದಾಗಿ ಒಪ್ಪಿಕೊಂಡಿರುತ್ತಾರೆ. ಆದರೆ 1 ನೇ ಆರೋಪಿಯ ಬಗ್ಗೆ ದಾಖಲಾತಿಗಳನ್ನು ನೋಡಿದ ನಂತರ ಸುಮಾರು ಐದು ವರ್ಷಗಳ ನಂತರ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ ಎಂಬುದಾಗಿ ನುಡಿದಿರುತ್ತಾರೆ. ಹಾಗೆಯೇ 13 ಮತ್ತು 14 ನೇ ಆರೋಪಿತರು ತನ್ನನ್ನು ಹೆಣ್ಣು ನೋಡಲು 1 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ ಎಂಬುದಾಗಿ ಒಪ್ಪಿಕೊಂಡಿರುತ್ತಾರೆ. ಆದುದರಿಂದ ಪ್ರಾಸಾ-3 ರವರು ತನ್ನ ದೂರಿನಲ್ಲಿ ಹೇಳಲಾದ ಅಂಶಗಳನ್ನಾಗಲೀ, ತನ್ನ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಹೇಳಲಾದ ಅಂಶಗಳನ್ನಾಗಲೀ ನ್ಯಾಯಾಲಯದಲ್ಲಿ ಪುನರುಚ್ಚರಿಸಲು ಸಫಲರಾಗಿರುವುದಿಲ್ಲ. 13 ಮತ್ತು 14 ನೇ ಆರೋಪಿತರು ತನಗೆ ಬೇರೆ ಜಾತಿಯ ಹೆಣ್ಣನ್ನು ತೋರಿಸಿ ಒಳಸಂಚಿನಿಂದ ಬೇರೆ ಜಾತಿಯ ಹೆಣ್ಣನ್ನು ಮದುವೆ ಮಾಡಿಸಿರುತ್ತಾರೆ ಎಂಬುದಾಗಿ ಹೇಳಲಾದ ಅಂಶಗಳನ್ನು ತನ್ನ ಪಾಟೀ ಸವಾಲು ನುಡಿಸುವಲ್ಲಿ ಅಭಿಯೋಜನೆಯವರು ವಿಫಲರಾಗಿರುತ್ತಾರೆ. ಆದುದರಿಂದ 1 ನೇ ಆರೋಪಿಯು ಬೇರೆ ಜನಾಂಗಕ್ಕೆ ಸೇರಿದವರು ಎಂಬುದು ಮದುವೆಯಾದ 2-3 ತಿಂಗಳ ನಂತರ ಗೊತ್ತಾಗಿದ್ದರೂ

ಸಹ, 1 ನೇ ಆರೋಪಿಯ ವಿರುದ್ಧ ಯಾವುದೇ ದೂರನ್ನು ನೀಡಲು ಮುಂದಾಗದೇ ಇರುವುದು ಕಂಡುಬರುತ್ತದೆ. ಆದರೆ ಆರೋಪಿತರ ವಿರುದ್ಧ ನಿಪಿ-4 ರಂತೆ ದೂರನ್ನು 1 ನೇ ಆರೋಪಿ ಬೇರೆ ಎಸ್‌ಸಿ ಜನಾಂಗಕ್ಕೆ ಸೇರಿದವರು ಎಂಬುದಾಗಿ ಗೊತ್ತಾದ ಐದು ವರ್ಷಗಳ ನಂತರ ಫಿರ್ಯಾದಿಯು ಈ ದೂರನ್ನು ಸಲ್ಲಿಸಿಕೊಂಡು ಬಂದಿರುವುದು ಸಂಶಯಕ್ಕೆ ಆಸ್ಪದ ಮಾಡಿಕೊಡುತ್ತದೆ. ಈ ಪ್ರಕರಣದ ಫಿರ್ಯಾದಿ 1 ನೇ ಆರೋಪಿಯನ್ನು ವಿವಾಹವಾದ ನಂತರ ಅವರಿಗೆ ಒಂದು ಮಗು ಸಹ ಜನಿಸಿರುತ್ತದೆ. ಪ್ರಾಸಾ-3 ರವರೇ ನ್ಯಾಯಾಲಯದಲ್ಲಿ ಒಪ್ಪಿಕೊಂಡಿರುವಂತೆ ತಾನು ಸ್ವಇಚ್ಛೆಯಿಂದ ಒಪ್ಪಿ 1 ನೇ ಆರೋಪಿಯನ್ನು ಮದುವೆಯಾಗಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಆದುದರಿಂದ ಪ್ರಾಸಾ-3 ರವರು ತಮ್ಮ ದೂರಿನಲ್ಲಿ ಹೇಳಲಾದ ಅಂಶಗಳನ್ನು ಹಾಗೂ ತನ್ನ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ಹೇಳಲಾದ ಅಂಶಗಳನ್ನು ನ್ಯಾಯಾಲಯದಲ್ಲಿ ರುಜುವಾತುಪಡಿಸಲು ಸಫಲರಾಗಿರುವುದಿಲ್ಲ. ಆದುದರಿಂದ ಪ್ರಾಸಾ-3 ರವರು ಆರೋಪಿತರ ವಿರುದ್ಧ ನಿಪಿ-1 ರಿಂದ 10 ರಲ್ಲಿ ಹೇಳಲಾದ ಅಂಶಗಳನ್ನು ನ್ಯಾಯಾಲಯದಲ್ಲಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ.

10. ಈ ಪ್ರಕರಣದಲ್ಲಿ ಚಾಸಾ-2/ಪ್ರಾಸಾ-1 ಮತ್ತು ಚಾಸಾ-3/ಪ್ರಾಸಾ-2 ರವರು ಸ್ಥಳ ಮಹಜರು ಸಾಕ್ಷಿದಾರರಾಗಿದ್ದು, ಸ್ಥಳ ಮಹಜರಿನಲ್ಲಿ ತಮ್ಮ ಸಹಿಯನ್ನು ಪೊಲೀಸರ ಕೋರಿಕೆಯ ಮೇರೆಗೆ ಮಾಡಿರುವುದಾಗಿ, ಸ್ಥಳ ಮಹಜರನ್ನು ನಿಪಿ-1 ಎಂದು ಅದರಲ್ಲಿರುವ ಸಹಿಯನ್ನು ನಿಪಿ-1(ಎ) ಹಾಗೂ 1(ಬಿ) ಎಂಬುದಾಗಿ ಗುರುತಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆ ಕಾಲಕ್ಕೆ ನಿಪಿ-2 ಮತ್ತು 3 ಭಾವಚಿತ್ರಗಳನ್ನು ಪೊಲೀಸರು ತೆಗೆದಿರುವುದಾಗಿ ತಿಳಿಸಿರುತ್ತಾರೆ. ನಿಪಿ 1 ರಿಂದ 3 ನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ. ಆರೋಪಿತರ ಪರಿಚಯ ಇಲ್ಲ, ಪೊಲೀಸರು ಯಾವ ಉದ್ದೇಶಕ್ಕಾಗಿ ಸಹಿ ಪಡೆದಿದ್ದಾರೆ ಹಾಗೂ ಭಾವಚಿತ್ರಗಳನ್ನು ಏಕೆ ತೆಗೆದಿದ್ದಾರೆ ಎಂಬುದು ಗೊತ್ತಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂಬುದಾಗಿ ಸಾಕ್ಷಿ ನುಡಿದಿರುತ್ತಾರೆ. ಸದರಿ

ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿದಾಗ ಅಭಿಯೋಜನೆಯ ಪರವಾಗಿ ಸದರಿ ಸಾಕ್ಷಿದಾರರಿಂದ ನಿಪಿ-1 ರಿಂದ 3 ರಲ್ಲಿ ಹೇಳಲಾದ ಅಂಶಗಳನ್ನು ಪುನರುಚ್ಚರಿಸುವಲ್ಲಿ ಅಭಿಯೋಜನೆಯವರು ಸಫಲರಾಗಿರುವುದಿಲ್ಲ.

11. ಈ ಪ್ರಕರಣದಲ್ಲಿ ಪ್ರಾಸಾ-4 ರಿಂದ 7 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿಯವರು ತಾವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. 1 ನೇ ಆರೋಪಿ ಮತ್ತು ಪ್ರಾಸಾ-1 ರವರ ನಡುವೆ ಆದ ವಿವಾಹದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ. ಈ ಪ್ರಕರಣದ ಫಿರ್ಯಾದುದಾರರು 1 ನೇ ಆರೋಪಿ ಜೊತೆ ಎಲ್ಲಿ ಮದುವೆಯಾಗಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇಲ್ಲ ಎಂಬುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದುದರಿಂದ ಸದರಿ ಸಾಕ್ಷಿದಾರರು ಪೊಲೀಸರ ಮುಂದೆ ನೀಡಲಾದ ಹೇಳಿಕೆಯನ್ನು ಒಪ್ಪಿಕೊಳ್ಳದೇ ಇರುವುದರಿಂದ ಅವುಗಳನ್ನು ನಿಪಿ-11 ರಿಂದ 14 ಎಂದು ಗುರುತಿಸಲಾಗಿದೆ. ಆದುದರಿಂದ 1 ನೇ ಆರೋಪಿ ಮತ್ತು ಅವನ ಮನೆಯವರು ಹಾಗೂ ಆರೋಪಿ 13 ಮತ್ತು 14 ರವರು, 1 ನೇ ಆರೋಪಿಯನ್ನು ಮೋಸದಿಂದ ಈ ಪ್ರಕರಣದ ಫಿರ್ಯಾದುದಾರರಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ ಎಂಬ ಅಂಶಗಳನ್ನು ಸದರಿ ಸಾಕ್ಷಿದಾರರ ಮೂಲಕ ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆ ಹಾಗೂ ಆರೋಪಿತರು ಒಳಸಂಚನ್ನು ರೂಪಿಸುವುದರ ಮೂಲಕ ಫಿರ್ಯಾದುದಾರರಿಗೆ ಮೋಸದಿಂದ 1 ನೇ ಆರೋಪಿಯನ್ನು ವಿವಾಹ ಮಾಡಿಕೊಟ್ಟಿರುತ್ತಾರೆ ಎಂಬ ಅಂಶಗಳನ್ನು ಸಹ ಅಭಿಯೋಜನೆಯವರು ನ್ಯಾಯಾಲಯದಲ್ಲಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ.

12. ಪ್ರಾಸಾ-10 ರವರು ಅಂಬಾಭವಾನಿ ದೇವಸ್ಥಾನದ ಕ್ಯಾಶಿಯರ್ ಅಗಿದ್ದು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದು, ತಾವು 20 ವರ್ಷಗಳಿಂದ ಅಂಬಾಭವಾನಿ ದೇವಸ್ಥಾನದಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ದಿನಾಂಕ 09.11.2009 ರಂದು ಕೊಟ್ರೇಶ್ ಮತ್ತು ಮನಿಶಾರವರ ಮದುವೆ

ಸಂಬಂಧವಾಗಿ ತಾನು ರಸೀದಿಯನ್ನು ನೀಡಿದ್ದು, ಅದನ್ನು ನಿಪಿ-17 ಎಂದು ಗುರುತಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನಿಪಿ-17(ಬಿ) ಎಂಬುದಾಗಿ ಗುರುತಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಸದರಿ ರಸೀದಿ ನೀಡುವ ಕಾಲಕ್ಕೆ ಯಾರು ಹಣವನ್ನು ನೀಡಿದ್ದರು ಎಂಬುದು ತನಗೆ ಮಾಹಿತಿ ಇಲ್ಲ, ಸಾಮಾನ್ಯವಾಗಿ ನಿಪಿ-17 ರ ರಸೀದಿಯನ್ನು ದೇಣಿಗೆಯ ಸಂಬಂಧವಾಗಿ ಹಣ ಪಡೆದಿರುವುದರ ಬಗ್ಗೆ ನೀಡಲಾಗಿರುತ್ತದೆ ಎಂದು ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ಆದುದರಿಂದ 1 ನೇ ಆರೋಪಿ ಮತ್ತು ಫಿರ್ಯಾದುದಾರರ ಮದುವೆ ಅಂಬಾಭವಾನಿ ದೇವಸ್ಥಾನದಲ್ಲಿ ನಡೆದಿದೆ ಎಂಬುದಕ್ಕೆ ಸಂಬಂಧಿಸಿದಂತೆ ಸದರಿ ಸಾಕ್ಷಿದಾರರು ತಾವು ದೇಣಿಗೆಯನ್ನು ಪಡೆದಿರುವುದರ ಬಗ್ಗೆ ನಿಪಿ-17 ರಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ ಎಂಬುದಾಗಿ ಒಪ್ಪಿಕೊಂಡಿರುತ್ತಾರೆ. ಆದುದರಿಂದ ಪ್ರಾಸಾ-10 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಂಬಾಭವಾನಿ ದೇವಸ್ಥಾನದಲ್ಲಿ ದೇಣಿಗೆಯನ್ನು ನಿಪಿ-17 ರಂತೆ ಯಾರು ಪಾವತಿಸಿರುತ್ತಾರೆ ಎಂಬುದನ್ನು ಸದರಿ ಸಾಕ್ಷಿದಾರರ ಮೂಲಕ ಅಭಿಯೋಜನೆಯವರು ರುಜುವಾತುಪಡಿಸಲು ವಿಫಲರಾಗಿರುತ್ತಾರೆ.

13. ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಪ್ರಾಸಾ-8 ಮತ್ತು 9 ರವರು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಾ, ಈ ಪ್ರಕರಣದಲ್ಲಿ ಚಾಸಾ-1 ರವರಿಂದ ದೂರನ್ನು ಸ್ವೀಕರಿಸಿದ ಬಗ್ಗೆ ನಿಪಿ-1 ರಂತೆ ಸ್ಥಳ ಮಹಜರು ಕ್ರಮ ಜರುಗಿಸಿದ ಬಗ್ಗೆ ನಿಪಿ-2 ಮತ್ತು 3 ರಂತೆ ಭಾವಚಿತ್ರಗಳನ್ನು ತೆಗೆದ ಬಗ್ಗೆ, ಆರೋಪಿಯ ಜಾತಿ ಮತ್ತು ಜನ್ಮ ದಿನಾಂಕದ ಬಗ್ಗೆ ನಿಪಿ 16 ರಂತೆ ಪಡೆದ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಹಾಗೆಯೇ ಆರೋಪಿ ವಿರುದ್ಧ ಪ್ರಕರಣವನ್ನು ದಾಖಲಿಸಿದ ಬಗ್ಗೆ ನಿಪಿ 4 ರಂತೆ ದೂರನ್ನು ಸ್ವೀಕರಿಸಿದ ಬಗ್ಗೆ ನಿಪಿ 15 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ಆದರೆ ಪ್ರಾಸಾ 8 ಮತ್ತು 9 ರವರ ಸಾಕ್ಷ್ಯಕ್ಕೆ ಪೂರಕವಾಗಿ ಈ ಪ್ರಕಣದ ತನಿಖಾಧಿಕಾರಿಗಳು ಆರೋಪಿತರ ವಿರುದ್ಧ ಸಲ್ಲಿಸಲಾದ ದೋಷಾರೋಪಣ

ಪಟ್ಟಿಯಲ್ಲಿ ಹೇಳಲಾದ ಅಂಶಗಳನ್ನು ಅಭಿಯೋಜನೆ ಪರ ಸಾಕ್ಷಿದಾರರ ಮೂಲಕ ಆರೋಪಿತರ ಮೇಲಿನ ಅಪಾಧನೆಗಳನ್ನು ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆರೋಪತರು ತಮ್ಮ ವಿರುದ್ಧ ಪ್ರಾಸಾ 1 ರವರು ಮತ್ತು ಪ್ರಾಸಾ 8 ಮತ್ತು 9 ರವರು ನೀಡಲಾದ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ ಹಾಗೂ ತಮ್ಮ ಪರವಾಗಿ ಯಾವುದೇ ಸಾಕ್ಷ್ಯ ವಿಚಾರಣೆ ಇರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಆದುದರಿಂದ ಈ ಪ್ರಕರಣದ ಫಿರ್ಯಾದುದಾರ ತನ್ನ ದೂರಿನಲ್ಲಿ ಹೇಳಲಾದ ಅಂಶಗಳನ್ನು ನ್ಯಾಯಾಲಯದಲ್ಲಿ ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುವ ಕಾರಣ ಪ್ರಾಸಾ 1 ರವರಿಗೆ ಮೋಸದಿಂದ 1 ನೇ ಆರೋಪಿಯನ್ನು ವಿವಾಹ ಮಾಡಿಕೊಟ್ಟಿರುತ್ತಾರೆ ಎಂಬ ಅಂಶಗಳನ್ನು ಹಾಗೂ ಒಳಸಂಚನ್ನು ರೂಪಿಸಿ ಏಕೋದ್ದೇಶದಿಂದ ಫಿರ್ಯಾದುದಾರರಿಗೆ ಬೇರೆ ಜಾತಿ ಎಂಬುದು ಗೊತ್ತಿದ್ದರೂ ಸಹ 1 ನೇ ಆರೋಪಿಯನ್ನು ಮದುವೆ ಮಾಡಿರುತ್ತಾರೆ ಎಂಬ ಅಂಶಗಳನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ. ಈಗಾಗಲೇ ಮೂಲ ಸಿಸಿ ನಂ. 978/2015 ರಲ್ಲಿ ವಿಚಾರಣೆ ನಡೆದು, ಆರೋಪಿ 1 ರಿಂದ 5 ಹಾಗೂ 12 ರಿಂದ 15 ರವರನ್ನು ದೋಷಮುಕ್ತಗೊಳಿಸಲಾಗಿರುತ್ತದೆ. ಸದರಿ ಲಾಭವನ್ನು ಪ್ರಸ್ತುತ ಆರೋಪಿತರಿಗೂ ನೀಡುವುದು ಸೂಕ್ತವಾಗಿರುತ್ತದೆ. ಆದುದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುವುದಾಗಿ ಈ ನ್ಯಾಯಾಲಯವು ಅಭಿಪ್ರಾಯ ಪಟ್ಟು ಅಂಶ ನಂ.**1** ಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

14. <u>ಅಂಶ ನಂ.**2**</u>**:-** ಈ ಮೇಲಿನ ಚರ್ಚೆಗಳಿಂದಾಗಿ ಹಾಗೂ ಅಂಶ ನಂ.1 ರ ಉತ್ತರದ ಕಾರಣಕ್ಕಾಗಿ, ಈ ಕೆಳಗಿನಂತೆ ಆದೇಶ ಮಾಡಿರುತ್ತದೆ:

<u>ಆದೇಶ</u>

ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ 248(1) ರ ಪ್ರಕಾರ 8 ರಿಂದಾ 10 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 120 ಬಿ ಹಾಗೂ 420 ಸಹಕಲಂ 149 ರ ಅಡಿಯಲ್ಲಿ ಅಪರಾಧಗಳಿಂದ ದೋಷಮುಕ್ತರೆಂದು ಬಿಡುಗಡೆ ಮಾಡಲಾಗಿದೆ.

8 ರಿಂದಾ 10 ನೇ ಆರೋಪಿತರ ಪರ ಜಾರಿಗೊಳಿಸಿದ ಜಾಮೀನು ಹಾಗೂ ಮುಚ್ಚಳಿಕೆ ಪತ್ರಗಳನ್ನು ಮೇಲ್ಕಂಡವಿ ಅವಧಿ ಮುಗಿದ ನಂತರ ರದ್ದುಗೊಳಿಸತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮುಖಾಂತರ ನೇರವಾಗಿ ಉಕ್ತಲೇಖನ ನೀಡಿದ್ದು ಅವರು ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ **1** ನೇ ಆಗಷ್ಟ, **2026** ರಂದು ನಮ್ಮ ಸಹಿಯೊಂದಿಗೆ ಉದ್ಘೋಷಿಸಲಾಯಿತು).

**(ಮಂಜುನಾಥ ಎಂ.ಎಸ್)**
**2** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ನ್ಯಾಯಾಲಯ, ರಾಣೇಬೆನ್ನೂರು.

<u>ಅನುಬಂಧ</u>

ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾಗಿರುವ ಸಾಕ್ಷಿಗಳ ಪಟ್ಟಿ:

| | | |
|---|---|---|
| ಪ್ರಾಸಾ-1 | : | ಚಂದ್ರಪ್ಪ ತಿರುಕಪ್ಪ ಊದಗಟ್ಟಿ |
| ಪ್ರಾಸಾ-2 | : | ಗಿರೀಶ ಶಂಕ್ರಪ್ಪ ಜನಿವಾರದ |
| ಪ್ರಾಸಾ-3 | : | ಕೊಟ್ರೇಶಪ್ಪ ಮೈಲಾರಪ್ಪ ಬಸಪ್ಪನವರ |
| ಪ್ರಾಸಾ-4 | : | ಲೋಹಿತ್ ಲಕ್ಷ್ಮಣ ಮಡಿವಾಳರ |
| ಪ್ರಾಸಾ-5 | : | ಶ್ರೀನಿವಾಸ ರಾಮಪ್ಪ ಹಟ್ಟಿ |
| ಪ್ರಾಸಾ-6 | : | ಅನುಸೂಯ ದಾನಪ್ಪ ಹುಲ್ಲೂರು |
| ಪ್ರಾಸಾ-7 | : | ಅರ್ಜುನ್ ಕಲ್ಲಪ್ಪ ಬಂಕಾಪುರ |
| ಪ್ರಾಸಾ-8 | : | ಮಲ್ಲಯ್ಯ ಮುಪ್ಪಯ್ಯ ಬಿಸಲಹಳ್ಳಿ |
| ಪ್ರಾಸಾ-9 | : | ಸಂತೋಷ ಮಲ್ಲಗೌಡ ಪಾಟೀಲ |
| ಪ್ರಾಸಾ-10 | : | ಸುಭಾಷ ಶಂಕರ ಸಾಬ್ ಭೂತೆ. |

ಆರೋಪಿತರ ಪರವಾಗಿ ವಿಚಾರಣೆ ಮಾಡಲಾಗಿರುವ ಸಾಕ್ಷಿಗಳ ಪಟ್ಟಿ:

-ಇಲ್ಲ-

ಅಭಿಯೋಜನೆಯ ನಿಶಾನೆಯಾಗಿ ಗುರ್ತಿಸಲಾಗಿರುವ ದಸ್ತಾವೇಜುಗಳ ಪಟ್ಟಿ:

| | | |
|---|---|---|
| ನಿಪಿ-1 | : | ಪಂಚನಾಮೆ |
| ನಿಪಿ-2 ಹಾಗೂ 3 | : | ಭಾವಚಿತ್ರಗಳು |
| ನಿಪಿ-4 | : | ಫಿರ್ಯಾದಿ |
| ನಿಪಿ-5 ಹಾಗೂ 6 | : | ಪತ್ರ |
| ನಿಪಿ-7 | : | ವಿವಾಹ ಆಮಂತ್ರಣ ಪತ್ರ |
| ನಿಪಿ-8 | : | ಭಾವಚಿತ್ರ |
| ನಿಪಿ-9 | : | ಬಯೋಡೆಟಾ |
| ನಿಪಿ-10 | : | ವರ್ಗಾವಣೆ ಪ್ರಮಾಣ ಪತ್ರ |
| ನಿಪಿ-11 ರಿಂದ 14 | : | ಹೇಳಿಕೆಗಳು |

ನಿಪಿ-15 : ಪ್ರಥಮ ವರ್ತಮಾನ ಹೇಳಿಕೆ
ನಿಪಿ-16 : ಜನನ ಜಾತಿ ಪ್ರಮಾಣ ಪತ್ರ
ನಿಪಿ-17 : ದೇಣಿಗೆ ರಶೀದಿ.

ಆರೋಪಿತರ ಪರವಾಗಿ ನಿಶಾನೆಯಾಗಿ ಗುರುತಿಸಲಾಗಿರುವ ದಸ್ತಾವೇಜುಗಳ ಪಟ್ಟಿ:-

-ಇಲ್ಲ-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂ ಎಫ್ ಸಿ, ನ್ಯಾಯಾಲಯ, ರಾಣೇಬೆನ್ನೂರು.